ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ, ಡಾ. ಬಿ. ಆರ್. ಅಂಬೇಡ್ಕರ್ ರಸ್ತೆ,
ಬೆಂಗಳೂರು –560001. ದೂ. 22034319

ಸಂಖ್ಯೆ: ಸಿಐ 173 ಸಿಎಸ್‌ಸಿ 2015 ದಿನಾಂಕ: 27.04.2016.

# ಸೇರ್ಪಡೆ ಆದೇಶ

ಕರ್ನಾಟಕ ವೈಮಾಂತರಿಕ್ಷ ತಾಂತ್ರಿಕ ಕೇಂದ್ರವನ್ನು (Karnataka Aerospace Technology Centre) ರೂ. 2089.00 ಲಕ್ಷಗಳ ವೆಚ್ಚದಲ್ಲಿ ಸ್ಥಾಪಿಸಲು ಸರ್ಕಾರಿ ಆದೇಶ ಸಂಖ್ಯೆ: ಸಿಐ 173 ಸಪ್ರಕೈ 2015, ದಿನಾಂಕ: 29.03.2016ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಆದೇಶದ ಭಾಗದಲ್ಲಿನ ಕೋಷ್ಟಕದಲ್ಲಿ ಈ ಕೇಂದ್ರಕ್ಕೆ ತಗಲುವ ವೆಚ್ಚಗಳನ್ನು ವಿವರಿಸಲಾಗಿದ್ದು, ಈ ಕೋಷ್ಟಕದ ನಂತರದ ಭಾಗದಲ್ಲಿ **"ಕರ್ನಾಟಕ ವೈಮಾಂತರಿಕ್ಷ ತಾಂತ್ರಿಕ ಕೇಂದ್ರ ಸ್ಥಾಪನೆಗೆ ತಗಲುವ ಬಂಡವಾಳ ವೆಚ್ಚವನ್ನು ವಿಶಿಷ್ಟ ಕೌಶಲ್ಯಾಭಿವೃದ್ಧಿ ಸಂಸ್ಥೆಗಳು ಯೋಜನೆಯ ಲೆಕ್ಕಶೀರ್ಷಿಕೆ 4851–00–102–0–09 (132) ರಡಿ ಹಾಗೂ ಕಾರ್ಯಾಚರಣೆಯ ವೆಚ್ಚವನ್ನು ಲೆಕ್ಕಶೀರ್ಷಿಕೆ 2851–00–102–0–69 (059) ರಡಿಯಲ್ಲಿ ಭರಿಸತಕ್ಕದ್ದು"** ಎಂದು ಸೇರಿಸಿ ಓದಿಕೊಳ್ಳತಕ್ಕದ್ದು.

ಉಳಿದಂತೆ, ಎಲ್ಲಾ ಅಂಶಗಳು ಯಥಾವತ್ ಹಾಗೆಯೇ ಇರುತ್ತವೆ. ಯಾವ ಬದಲಾವಣೆಗಳು ಇರುವುದಿಲ್ಲ.

KARNATAKA COUNCIL FOR TECHNOLOGICAL UPGRADATION ★ BANGALORE ★
M.D.
2
02 MAY 2016
78

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
27.4.2016
(ಎಲ್.ಎಸ್. ಶ್ರೀಕಂಠಬಾಬು)
ಸರ್ಕಾರದ ಅಧೀನ ಕಾರ್ಯದರ್ಶಿ (ಸಪ್ರಕೈ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು – ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕೋರಿ ಕಳುಹಿಸಲಾಗಿದೆ. ತದನಂತರ, ಪ್ರಕಟಗೊಂಡ ಸಂಚಿಕೆಗಳ 25 ಪ್ರತಿಗಳನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಕೋರಲಾಗಿದೆ.

ಪ್ರತಿಯನ್ನು:

1) ಪ್ರಧಾನ ಮಹಾಲೇಖಪಾಲರು (ಜಿ & ಎಸ್‌ಎಸ್‌ಎ) ಕರ್ನಾಟಕ, ಹೊಸ ಕಟ್ಟಡ, 'ಆಡಿಟ್ ಭವನ', ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು – 560001.
2) ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ) ಕರ್ನಾಟಕ, ಹೊಸ ಕಟ್ಟಡ, 'ಆಡಿಟ್ ಭವನ', ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು – 560001.
3) ಪ್ರಧಾನ ಮಹಾಲೇಖಪಾಲರು (ಎ &ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು – 560001.

4) ಮಾನ್ಯ ಮುಖ್ಯ ಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಯವರು, ವಿಧಾನ ಸೌಧ, ಬೆಂಗಳೂರು.
5) ಮಾನ್ಯ ಮುಖ್ಯ ಮಂತ್ರಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
6) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ, ವಿಧಾನಸೌಧ, ಬೆಂಗಳೂರು (**ಸಚಿವ ಸಂಪುಟದ ವಿಷಯ ಸಂಖ್ಯೆ: ಸಿ: 147/2016**)
7) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
8) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
9) ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–1.
10) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ತಾಂತ್ರಿಕ ಉನ್ನತೀಕರಣ ಪರಿಷತ್, 4ನೇ ಮಹಡಿ, ಬಸವ ಭವನ, ಶ್ರೀ ಬಸವೇಶ್ವರ ವೃತ್ತ, ಬೆಂಗಳೂರ–1.
11) ಮಾನ್ಯ ಸಣ್ಣ ಕೈಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
12) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ–1), ವಿಧಾನಸೌಧ, ಬೆಂಗಳೂರು–1.
13) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
14) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
15) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ವೈಮಾಂತರಿಕ್ಷ ತಾಂತ್ರಿಕ ಕೇಂದ್ರವನ್ನು (Karnataka Aerospace Technology Centre) ಸ್ಥಾಪಿಸುವ ಕುರಿತು.

ಓದಲಾಗಿದೆ: 1) ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರ ಪತ್ರ ಸಂಖ್ಯೆ: ಕೈವಾಇ/ ಕೈಎ/ ಇ1/ 556/ ಎಟಿಸಿ/ 2015-16, ದಿನಾಂಕ: 16.12.2015.

2) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ತಾಂತ್ರಿಕ ಉನ್ನತೀಕರಣ ಪರಿಷತ್ ಇವರ ಪತ್ರ ಸಂಖ್ಯೆ: ಕೆಸಿಟಿಯು/ಎಟಿಸಿ/2015-16/321, ದಿನಾಂಕ: 01.12.2015.

* * * * *

**ಪ್ರಸ್ತಾವನೆ:**

2015-16ನೇ ಸಾಲಿನ ಆಯವ್ಯಯದಲ್ಲಿ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ವ್ಯಾಪ್ತಿಗೆ ಒಳಪಡುವಂತೆ ಹಲವು ಹೊಸ ಯೋಜನೆಗಳನ್ನು ಘೋಷಿಸಲಾಗಿದ್ದು, ಅವುಗಳಲ್ಲಿ ಕಂಡಿಕೆ – 414 ಈ ಕೆಳಕಂಡಂತಿರುತ್ತದೆ.

> *"ವೈಮಾಂತರಿಕ್ಷ ತಾಂತ್ರಿಕ ಕೇಂದ್ರ* (Aerospace Technology Centre) *ವನ್ನು ಬೆಂಗಳೂರಿನಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಮಾದರಿಯಲ್ಲಿ (ಪಿಪಿಪಿ) ಸ್ಥಾಪಿಸಲು ಉದ್ದೇಶಿಸಲಾಗಿದೆ."*

ಅದರಂತೆ, ಓದಲಾದ ಕ್ರಮಾಂಕ (1)ರ ಪತ್ರದಲ್ಲಿ ಆಯುಕ್ತರು, ಕೈಗಾರಿಕಾಭಿವೃದ್ಧಿ ಮತ್ತು ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರು ಸದರಿ ಯೋಜನೆಯ ಪ್ರಸ್ತಾವನೆಯನ್ನು ಓದಲಾದ ಕ್ರಮಾಂಕ (2)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ತಾಂತ್ರಿಕ ಉನ್ನತೀಕರಣ ಪರಿಷತ್ ಇವರು ಸಲ್ಲಿಸಿದ್ದು, ಸದರಿ ಪ್ರಸ್ತಾವನೆಯನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

ರಾಜ್ಯದಲ್ಲಿ ಈಗಾಗಲೇ ಕರ್ನಾಟಕ ವೈಮಾಂತರಿಕ್ಷ ನೀತಿ 2013-23 ಅನ್ನು ಘೋಷಣೆ ಮಾಡಲಾಗಿದ್ದು, ಇದರ ಮೂಲ ಉದ್ದೇಶದಂತೆ ರಾಜ್ಯವನ್ನು ವೈಮಾಂತರಿಕ್ಷ ತಂತ್ರಜ್ಞಾನದಲ್ಲಿ ಪ್ರಮುಖ ಕೇಂದ್ರವನ್ನಾಗಿ ರೂಪಿಸುವಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಏರೋಸ್ಪೇಸ್ ಕಾಮನ್ ಫಿನಿಷಿಂಗ್ ಸೆಂಟರ್, ಏರೋಸ್ಪೇಸ್ ಟೆಕ್ನಾಲಜಿ ಸೆಂಟರ್ ಮತ್ತು ಏರೋಸ್ಪೇಸ್ ಪಾರ್ಕ್‌ಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದ್ದು, ಈ ಬಗ್ಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಟಾಸ್ಕ್ ಫೋರ್ಸ್ ಕಮಿಟಿಯನ್ನು ಆಯುಕ್ತರು, ಕೈಗಾರಿಕಾಭಿವೃದ್ಧಿ ಇವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುತ್ತದೆ.

COUNCIL FOR TECHNOLOGICAL UPGRADATION
M.D.
6 APR 2016
17
BANGALORE

ವೈಮಾಂತರಿಕ್ಷ ವಲಯವು ಉನ್ನತ ತಾಂತ್ರಿಕತೆಯ ಕ್ಷೇತ್ರವಾಗಿದ್ದು, ಇದು ಸರ್ಕಾರದ ನಿಯಂತ್ರಣದಲ್ಲಿರುವ ಎನ್.ಎ.ಎಲ್., ಇಸ್ರೋ, ಡಿ.ಆರ್.ಡಿ.ಓ., ಹೆಚ್.ಎ.ಎಲ್. ಸಂಸ್ಥೆಗಳಿಗೆ ಮಾತ್ರ ಸೀಮಿತವಾಗಿದ್ದು, ಖಾಸಗಿ ವಲಯಕ್ಕೆ ಈ ತಾಂತ್ರಿಕತೆಯ ಸೌಲಭ್ಯ ದೊರಕುವುದು ಕಷ್ಟಕರವಾಗಿರುತ್ತದೆ. ಆದುದರಿಂದ ಕರ್ನಾಟಕ ವೈಮಾಂತರಿಕ್ಷ ತಾಂತ್ರಿಕ ಕೇಂದ್ರದ ಮೂಲಕ ಹೊಸ ಸಂಶೋಧನೆಗಳ ಅರಿವನ್ನು ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳಿಗೆ ನೀಡುವುದರಿಂದ ಈ ಕ್ಷೇತ್ರದಲ್ಲಿ ಅಭಿವೃದ್ಧಿ ಸಾಧ್ಯವಾಗುತ್ತದೆ. ಈ ಕೇಂದ್ರದಿಂದ, ರಾಜ್ಯದಲ್ಲಿನ ಸುಮಾರು 50 ವೈಮಾಂತರಿಕ್ಷ ಕೈಗಾರಿಕಾ ಘಟಕಗಳಿಗೆ ತಾಂತ್ರಿಕ ನೆರವು ನೀಡಲು ಸಹಾಯಕಾರಿಯಾಗಲಿದ್ದು, ಭವಿಷ್ಯದಲ್ಲಿ ಇವುಗಳ ಸಂಖ್ಯೆ ಇನ್ನೂ ಹೆಚ್ಚಾಗುವ ಸಾಧ್ಯತೆ ಇರುತ್ತವೆ.

ವೈಮಾಂತರಿಕ್ಷ ನೀತಿ ಕಂಡಿಕೆ 6.1 ರಲ್ಲಿ ಘೋಷಣೆಯಾಗಿರುವಂತೆ, ವೈಮಾಂತರಿಕ್ಷ ತಾಂತ್ರಿಕ ಕೇಂದ್ರವನ್ನು (ಏರೋಸ್ಪೇಸ್ ಟೆಕ್ನಾಲಜಿ ಸೆಂಟರ್) ಸ್ಥಾಪಿಸಿ, ಹೊಸ ಸಂಶೋಧನೆಗಳ ಅವಿಷ್ಕಾರಕ್ಕೆ ನೆರವು, ಹೊಸ ತಂತ್ರಜ್ಞಾನ ಕಂಪನಿಗಳನ್ನು ಬೆಳೆಸುವುದು, ತಂತ್ರಜ್ಞಾನವನ್ನು ಪ್ರಸರಿಸುವುದು, ತಂತ್ರಜ್ಞಾನ ಜಾಲವನ್ನು ಬೆಳೆಸುವುದು, ದತ್ತಾಂಶವನ್ನು, ವಿನ್ಯಾಸಗಳ ಮಾನದಂಡಗಳನ್ನು, ಉನ್ನತ ತಾಂತ್ರಿಕ ಪರಿಣಿತಿಯನ್ನು ನೀಡುವುದರ ಜೊತೆಗೆ ಯೋಗ್ಯತಾ ಪ್ರಮಾಣ ಪತ್ರಗಳನ್ನು ವೈಮಾಂತರಿಕ್ಷ ರಂಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳಿಗೆ ನೀಡಲು ಉದ್ದೇಶಿಸಲಾಗಿದ್ದು, ಈ ಕೇಂದ್ರದ ರೂಪುರೇಷಗಳ ಬಗ್ಗೆ ಸರ್ಕಾರದ ಮಟ್ಟದಲ್ಲಿ ಚರ್ಚಿಸಿ, ಈ ಸಂಸ್ಥೆಯನ್ನು ನೋಂದಾಯಿತ ಸೊಸೈಟಿ ಮಾದರಿಯಲ್ಲಿ ರಚಿಸಲು ಉದ್ದೇಶಿಸಲಾಗಿದೆ.

ಕೇಂದ್ರವು ಸಂಪೂರ್ಣವಾಗಿ ಕಾರ್ಯಾರಂಭಗೊಂಡ ನಂತರ ಮತ್ತು ಫಲಿತಾಂಶವನ್ನು ಆಧರಿಸಿ ಖಾಸಗಿ ವಲಯದ ಘಟಕಗಳು ಈ ಕೇಂದ್ರದಲ್ಲಿ ಹೂಡಿಕೆಯನ್ನು ಮಾಡಲು ಉದ್ದೇಶಿಸಿರುತ್ತವೆ. ಆದುದರಿಂದ, ಸರ್ಕಾರವೇ ಪ್ರಾರಂಭಿಕ ಹಂತದಲ್ಲಿ ಎಲ್ಲಾ ಆರ್ಥಿಕ ಹೊರೆಯನ್ನು ವಹಿಸಿಕೊಳ್ಳಬೇಕಾಗಿರುತ್ತದೆ. ಕೇಂದ್ರವು ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭಗೊಂಡ ನಂತರ ಹೆಚ್ಚಿನ ಖಾಸಗಿ ಸಂಸ್ಥೆಗಳು ಈ ಸಂಸ್ಥೆಯಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ಸಂಸ್ಥೆಯ ರಚನೆ ಮತ್ತು ಶಾಸನಾತ್ಮಕ ರೂಪು-ರೇಷಗಳನ್ನು ಪುನರ್ ಪರಿಶೀಲಿಸಬಹುದಾಗಿದ್ದು, ಪ್ರಾರಂಭದಲ್ಲಿ ಈ ಕೇಂದ್ರವನ್ನು ಎನ್.ಎ.ಎಲ್.ನ ಆವರಣದಲ್ಲಿ ಬಾಡಿಗೆ ಕಟ್ಟಡದಲ್ಲಿ ಪ್ರಾರಂಭಿಸಿ, ನಂತರ ಕೇಂದ್ರವನ್ನು ದೇವನಹಳ್ಳಿಯ ಬೆಂಗಳೂರು ವೈಮಾಂತರಿಕ್ಷ ಪಾರ್ಕ್‌ಗೆ ಸ್ಥಳಾಂತರಿಸುವುದು.

ಈ ಕೇಂದ್ರದ ಸ್ಥಾಪನೆಗೆ ಅಗತ್ಯವಿರುವ ರೂ. 2602.00 ಲಕ್ಷಗಳ ವರ್ಷಾವಾರು ವೆಚ್ಚಗಳ ವಿವರಗಳು ಈ ಕೆಳಗಿನಂತಿರುತ್ತವೆ.

(ರೂ. ಲಕ್ಷಗಳಲ್ಲಿ)

| **Particulars** | **Phase-I** | | **Phase-II** | | | **Total** |
|---|---|---|---|---|---|---|
| | 2015-16 | 2016-17 | 2017-18 | 2018-19 | 2019-20 | |
| Capital Expenditure | - | 600 | 320 | 300 | 100 | 1320 |
| Operational Expenditure | 50 | 300 | 300 | 310 | 322 | 1282 |
| **Total** | **50** | **900** | **620** | **610** | **422** | **2602** |

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಗಿನಂತೆ ಆದೇಶ ಹೊರಡಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಸಿಐ 173 ಸಿಎಸ್‌ಸಿ 2015, ಬೆಂಗಳೂರು, ದಿನಾಂಕ: 29.03.2016.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2015-16ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವಂತೆ, ವೈಮಾಂತರಿಕ್ಷ ಕೇಂದ್ರದಲ್ಲಿ ಹೊಸ ಸಂಶೋಧನೆಗಳ ಅವಿಷ್ಕಾರಕ್ಕೆ ನೆರವು, ಹೊಸ ತಂತ್ರಜ್ಞಾನ ಕಂಪನಿಗಳನ್ನು ಬೆಳೆಸುವುದು, ತಂತ್ರಜ್ಞಾನವನ್ನು ಪ್ರಸರಿಸುವುದು, ತಂತ್ರಜ್ಞಾನ ಜಾಲವನ್ನು ಬೆಳೆಸುವುದು, ದತ್ತಾಂಶವನ್ನು, ವಿನ್ಯಾಸಗಳ ಮಾನದಂಡಗಳನ್ನು, ಉನ್ನತ ತಾಂತ್ರಿಕ ಪರಿಣಿತಿಯನ್ನು ನೀಡುವುದರ ಜೊತೆಗೆ ಯೋಗ್ಯತಾ ಪ್ರಮಾಣ ಪತ್ರಗಳನ್ನು ವೈಮಾಂತರಿಕ್ಷ ರಂಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳಿಗೆ ದೊರಕುವಂತೆ ಮಾಡಲು ಸರ್ಕಾರದ ವತಿಯಿಂದ ವೈಮಾಂತರಿಕ್ಷ ತಾಂತ್ರಿಕ ಕೇಂದ್ರ (Aerospace Technology Centre) ವನ್ನು ಈ ಕೆಳಕಂಡ ಕೋಷ್ಟಕದಲ್ಲಿ ತಿಳಿಸಿರುವ ಬಂಡವಾಳ ವೆಚ್ಚ ಹಾಗೂ ಕಾರ್ಯಾಚರಣೆಯ ವೆಚ್ಚ ಒಟ್ಟು ರೂ. 2089.00 ಲಕ್ಷಗಳಲ್ಲಿ ಸ್ಥಾಪಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

(ರೂ. ಲಕ್ಷಗಳಲ್ಲಿ)

| **Particulars** | **Phase-I** | | **Phase-II** | | | **Total** |
|---|---|---|---|---|---|---|
| | **2016-17** | **2017-18** | **2018-19** | **2019-20** | **2020-21** | |
| Capital Expenditure | 300 | 320 | 300 | 300 | 100 | 1320 |
| Operational Expenditure | 50 | 150 | 250 | 319 | - | 769 |
| **Total** | **350** | **470** | **550** | **619** | **100** | **2089** |

ಈ ಯೋಜನೆಯ ಚೌಕಟ್ಟಿನ ಅಂಶಗಳ ವಿವರಗಳು ಈ ಕೆಳಕಂಡಂತಿವೆ.

(i) ಕರ್ನಾಟಕ ವೈಮಾಂತರಿಕ್ಷ ತಾಂತ್ರಿಕ ಕೇಂದ್ರವು ಕರ್ನಾಟಕ ಸೊಸೈಟಿ ಕಾಯ್ದೆ 1960 ಅಡಿ ನೋಂದಾಯಿತ ಸಂಸ್ಥೆಯಾಗಿರತಕ್ಕದ್ದು ಮತ್ತು ಈ ಸಂಸ್ಥೆಯ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಆಯುಕ್ತರು ಕಾರ್ಯನಿರ್ವಹಿಸುವುದು.

(ii) ಸಂಸ್ಥೆಯು ತನ್ನ ಅಂತರ್ ನಿಯಮಗಳು ಮತ್ತು ಬೈ-ಲಾಗಳಂತೆ ಕರ್ತವ್ಯವನ್ನು ನಿರ್ವಹಿಸತಕ್ಕದ್ದು.

(iii) ಪ್ರಾರಂಭದಲ್ಲಿ ಈ ಕೇಂದ್ರವನ್ನು ಎನ್.ಎ.ಎಲ್.ನ ಆವರಣದಲ್ಲಿ ಬಾಡಿಗೆ ಕಟ್ಟಡದಲ್ಲಿ ಪ್ರಾರಂಭಿಸಿ, ನಂತರ ಕೇಂದ್ರವನ್ನು ದೇವನಹಳ್ಳಿಯ ಬೆಂಗಳೂರು ವೈಮಾಂತರಿಕ್ಷ ಪಾರ್ಕ್‌ಗೆ ಸ್ಥಳಾಂತರಿಸುವುದು. ಇದಕ್ಕೆ ಅಗತ್ಯವಾದ 4 ಎಕರೆ ಜಾಗವನ್ನು ಈ ಪಾರ್ಕ್‌ನಲ್ಲಿ ಕೆ.ಐ.ಎ.ಡಿ.ಬಿ. ವತಿಯಿಂದ ಮೀಸಲಿಟ್ಟು ಒದಗಿಸುವುದು. ಈ ಜಾಗಕ್ಕೆ ತಗಲುವ ವೆಚ್ಚವನ್ನು ಸರ್ಕಾರದಿಂದ ಕೆ.ಐ.ಎ.ಡಿ.ಬಿ. ಸಂಸ್ಥೆಗೆ ಮರುಪಾವತಿ ಮಾಡಲಾಗುವುದು.

(iv) ಕೇಂದ್ರವು ಸಂಪೂರ್ಣವಾಗಿ ಕಾರ್ಯಾರಂಭಗೊಂಡ ನಂತರ ಮತ್ತು ಫಲಿತಾಂಶವನ್ನು ಆಧರಿಸಿ ಖಾಸಗಿ ವಲಯದ ಘಟಕಗಳು ಈ ಕೇಂದ್ರದಲ್ಲಿ ಹೂಡಿಕೆಯನ್ನು ಮಾಡಲು ಉದ್ದೇಶಿಸಿರುತ್ತವೆ. ಆದುದರಿಂದ, ಸರ್ಕಾರವೇ ಪ್ರಾರಂಭಿಕ ಹಂತದಲ್ಲಿ ಎಲ್ಲಾ ಆರ್ಥಿಕ ಹೊರೆಯನ್ನು ವಹಿಸಿಕೊಳ್ಳಬೇಕಾಗಿರುತ್ತದೆ. ಕೇಂದ್ರವು ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭಗೊಂಡ ನಂತರ ಹೆಚ್ಚಿನ ಖಾಸಗಿ ಸಂಸ್ಥೆಗಳು ಈ ಸಂಸ್ಥೆಯಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ಸಂಸ್ಥೆಯ ರಚನೆ ಮತ್ತು ಶಾಸನಾತ್ಮಕ ರೂಪು-ರೇಷಗಳನ್ನು ಪುನರ್ ಪರಿಶೀಲಿಸಬಹುದಾಗಿದೆ.

(v) ಈ ಕೇಂದ್ರವನ್ನು ನಡೆಸಲು ಉನ್ನತ ತಾಂತ್ರಿಕ ಪರಿಣಿತಿ ಹೊಂದಿದ ಮಾನವ ಸಂಪನ್ಮೂಲದ ಅವಶ್ಯಕತೆ ಇರುವುದರಿಂದ, ಇವರಿಗೆ ಮಾರುಕಟ್ಟೆಯಲ್ಲಿ ಪ್ರಸ್ತುತ ಇರುವ ದರದಲ್ಲಿ ಸೂಕ್ತ ವೇತನಗಳನ್ನು ನೀಡಿ, ಪ್ರತಿಭಾವಂತರನ್ನು ಈ ಕೇಂದ್ರದಲ್ಲಿ ನೇಮಕ ಮಾಡಿಕೊಳ್ಳಲು ಅವಕಾಶಗಳನ್ನು ಕಲ್ಪಿಸುವಂತೆ ಸಂಸ್ಥೆಯು ತನ್ನ ಬೈ-ಲಾಗಳನ್ನು ರೂಪಿಸಿಕೊಳ್ಳುವುದು.

ಯೋಜನಾ ಚೌಕಟ್ಟಿನ ಅಂಶಗಳಿಗೆ ಮಾರ್ಪಡುಗಳ ಅವಶ್ಯಕತೆ ಇದ್ದಲ್ಲಿ, ಸಚಿವ ಸಂಪುಟದ ಅನುಮೋದನೆಯೊಂದಿಗೆ ಮಾತ್ರ ಮಾಡಿಕೊಳ್ಳತಕ್ಕದ್ದು.

ಕೇಂದ್ರದ ಸ್ಥಾಪನೆಗೆ ಆಯಾಯ ವರ್ಷದಲ್ಲಿ ಬಂಡವಾಳ ವೆಚ್ಚ ಮತ್ತು ಕಾರ್ಯಕಾರಿ ವೆಚ್ಚಗಳಿಗೆ ಉಂಟಾಗುವ ಬೇಡಿಕೆಯನ್ವಯ ಮೇಲೆ ವರ್ಷಾವಾರು ನಿಗಧಿಪಡಿಸಿರುವ ವೆಚ್ಚಗಳನ್ನು ಒಟ್ಟಾರೆ ಬಂಡವಾಳ ವೆಚ್ಚ ರೂ. 1320.00 ಲಕ್ಷ ಮತ್ತು ಒಟ್ಟಾರೆ ಕಾರ್ಯಾಚರಣೆಯ ವೆಚ್ಚ ರೂ. 769.00 ಲಕ್ಷಗಳ ಮಿತಿಯೊಳಗೆ ಆಯಾಯ ಸಾಲಿಗೆ ಮರು ನಿಗಧಿಪಡಿಸಿಕೊಳ್ಳುವ ಅವಶ್ಯಕತೆ ಕಂಡು ಬಂದಲ್ಲಿ, ಸರ್ಕಾರದ ಅನುಮೋದನೆಯನ್ನು ಪಡೆದು ಸೂಕ್ತ ಮಾರ್ಪಾಡು ಮಾಡಿಕೊಳ್ಳತಕ್ಕದ್ದು.

ಈ ಕೇಂದ್ರದ ಸ್ಥಾಪನೆ ಕುರಿತಂತೆ ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ತಾಂತ್ರಿಕ ಉನ್ನತೀಕರಣ ಪರಿಷತ್ ಇವರು ಈ ಕೆಳಕಂಡ ಕ್ರಮಗಳನ್ನು ಕೂಡಲೇ ಕೈಗೊಳ್ಳತಕ್ಕದ್ದು.

- ಸಂಸ್ಥೆಯ ಅಂತರ್ ನಿಯಮಗಳು ಮತ್ತು ಬೈ-ಲಾಗಳನ್ನು ರೂಪಿಸಿ, ಸರ್ಕಾರದ ಅನುಮೋದನೆಯನ್ನು ಪಡೆದುಕೊಂಡ ನಂತರ ಕರ್ನಾಟಕ ವೈಮಾಂತರಿಕ್ಷ ತಾಂತ್ರಿಕ ಕೇಂದ್ರವನ್ನು ಕರ್ನಾಟಕ ಸೊಸೈಟಿ ಕಾಯ್ದೆ 1960 ಅಡಿ ನೋಂದಾಯಿಸಿಕೊಳ್ಳತಕ್ಕದ್ದು.
- ಸದರಿ ಬೈ-ಲಾಗಳಿಗೆ ಮಾರ್ಪಡುಗಳ ಅವಶ್ಯಕತೆ ಇದ್ದಲ್ಲಿ, ಕಡ್ಡಾಯವಾಗಿ ಸರ್ಕಾರದ ಅನುಮೋದನೆಯನ್ನು ಪಡೆದುಕೊಳ್ಳತಕ್ಕದ್ದು.
- ಅನುಷ್ಠಾನ ಸಂಸ್ಥೆಯಾಗಿ ಕರ್ನಾಟಕ ತಾಂತ್ರಿಕ ಉನ್ನತೀಕರಣ ಪರಿಷತ್, ಬೆಂಗಳೂರು ಸಂಸ್ಥೆಯು ಕಾರ್ಯನಿರ್ವಹಿಸುವುದು.

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿ 53 ಎಫ್‌ಆರ್‌ಓ 2015, ದಿನಾಂಕ: 09.03.2016 ಹಾಗೂ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಎಫ್‌ಡಿ 07 ವೆಚ್ಚ–1 2016, ದಿನಾಂಕ: 21.01.2016 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
29.03.2016
(ಎಲ್.ಎಸ್. ಶ್ರೀಕಂಠಬಾಬು)
ಸರ್ಕಾರದ ಅಧೀನ ಕಾರ್ಯದರ್ಶಿ (ಸಪ್ರಕೈ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು – ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕೋರಿ ಕಳುಹಿಸಲಾಗಿದೆ. ತದನಂತರ, ಪ್ರಕಟಗೊಂಡ ಸಂಚಿಕೆಗಳ 25 ಪ್ರತಿಗಳನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಕೋರಲಾಗಿದೆ.

ಪ್ರತಿಯನ್ನು:

1) ಪ್ರಧಾನ ಮಹಾಲೇಖಪಾಲರು (ಜಿ & ಎಸ್‌ಎಸ್‌ಎ) ಕರ್ನಾಟಕ, ಹೊಸ ಕಟ್ಟಡ, 'ಆಡಿಟ್ ಭವನ', ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು – 560001.
2) ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ) ಕರ್ನಾಟಕ, ಹೊಸ ಕಟ್ಟಡ, 'ಆಡಿಟ್ ಭವನ', ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು – 560001.
3) ಪ್ರಧಾನ ಮಹಾಲೇಖಪಾಲರು (ಎ &ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು – 560001.
4) ಮಾನ್ಯ ಮುಖ್ಯ ಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಯವರು, ವಿಧಾನ ಸೌಧ, ಬೆಂಗಳೂರು.
5) ಮಾನ್ಯ ಮುಖ್ಯ ಮಂತ್ರಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
6) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ, ವಿಧಾನಸೌಧ, ಬೆಂಗಳೂರು (ಸಚಿವ ಸಂಪುಟದ ವಿಷಯ ಸಂಖ್ಯೆ: ಸಿ: 147/2016)
7) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
8) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
9) ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–1.
10) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ತಾಂತ್ರಿಕ ಉನ್ನತೀಕರಣ ಪರಿಷತ್, 4ನೇ ಮಹಡಿ, ಬಸವ ಭವನ, ಶ್ರೀ ಬಸವೇಶ್ವರ ವೃತ್ತ, ಬೆಂಗಳೂರ–1.
11) ಮಾನ್ಯ ಸಣ್ಣ ಕೈಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
12) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ–1), ವಿಧಾನಸೌಧ, ಬೆಂಗಳೂರು–1.
13) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
14) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
15) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.